


International Journal of Kannada Research
www.kannadajournal.com

ISSN: 2454–5813
IJKR 2023; 9(4): 182-184
© 2023 IJKR
www.kannadajournal.com
Received: 23-10-2023
Accepted: 27-11-2023

**ಡಾ.ಎಂ ಚಿಕ್ಕಣ್ಣ**
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಕನ್ನಡ ಭಾಷಾ ವಿಭಾಗ,
ಎಸ್.ಡಿ.ಯು.ಐ.ಎಂ
ದೊಡ್ಡಬಳ್ಳಾಪುರ ಬೆಂ.ಗ್ರಾ.ಜಿಲ್ಲೆ,
ಕರ್ನಾಟಕ, ಭಾರತ

**Corresponding Author:**
**ಡಾ.ಎಂ ಚಿಕ್ಕಣ್ಣ**
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಕನ್ನಡ ಭಾಷಾ ವಿಭಾಗ,
ಎಸ್.ಡಿ.ಯು.ಐ.ಎಂ
ದೊಡ್ಡಬಳ್ಳಾಪುರ ಬೆಂ.ಗ್ರಾ.ಜಿಲ್ಲೆ,
ಕರ್ನಾಟಕ, ಭಾರತ

# ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಮತ್ತು ಆಧುನಿಕ ಮೌಲ್ಯಗಳು

**ಡಾ.ಎಂ ಚಿಕ್ಕಣ್ಣ**

**DOI:** https://doi.org/10.22271/24545813.2023.v9.i4c.916

**ಪೀಠಿಕೆ**

ಕನಕದಾಸರು ಜನಿಸಿದ್ದು ಬಾಡ ಎಂಬ ಗ್ರಾಮದಲ್ಲಿ. ನೆಲೆಸಿದ್ದು ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ. ಆದಿಕೇಶವ ಎಂಬುದು ಇವರ ಅಂಕಿತ. ಕುರುಬ ಜನಾಂಗಕ್ಕೆ ಸೇರಿದ ಇವರ ತಂದೆ ಬೀರಪ್ಪ ಹಾಗೂ ತಾಯಿ ಬಚ್ಚಮ್ಮ ವಿಭೂತಿ ಧರಿಸಿ ಶೈವ ಧರ್ಮವನ್ನು ಅನುಸರಿದರೂ ತಿರುಪತಿ ತಿಮ್ಮಪ್ಪನಲ್ಲಿ ಅಪಾರ ಭಕ್ತಿ ಇದ್ದಿದ್ದರಿಂದ ಮಗನಿಗೆ ತಿಮ್ಮಪ್ಪ ನಾಯಕನೆಂದೇ ಹೆಸರಿಟ್ಟರು. ತಿಮ್ಮಪ್ಪ ನಾಯಕ ಕನಕ ನಾಯಕನಾದದ್ದು ಪವಾಡದ ರೀತಿಯಲ್ಲಿ. ತಮ್ಮ ಜೀವಿತದಲ್ಲಿಯೇ ವಿಜಯನಗರ ಸಾಮ್ರಾಜ್ಯದ ಏಳು–ಬೀಳುಗಳನ್ನು ಕಂಡವರು ಇವರು. ಕನಕದಾಸರು ಸ್ವತಃ ಪಾಳೆಯಗಾರನಾಗಿ ಧನ ಸಂಪತ್ತನ್ನು, ವೈಭವವನ್ನು, ಅಧಿಕಾರವನ್ನು ಅನುಭವಿಸಿದರು. ಆದರೆ ನಂತರದ ತಮ್ಮ ಜೀವನದಲ್ಲಿ ಇವುಗಳ ನಿಷ್ಪ್ರಯೋಜಕತೆಯನ್ನೂ, ಅನಿತ್ಯತೆಯನ್ನೂ ಮನಗಂಡು ಹರಿಗೆ ಶರಣಾಗಿ ಹರಿದಾಸರಾದರು.

ಮನುಜ ಕುಲದ ಮಹತ್ವ ಸಾರಿದ ಚಿಂತನಕಾರರು ಮತ್ತು ಭಕ್ತಿ ಕೀರ್ತನೆಗಳ ಮೂಲಕ ದೇವರನ್ನು ಒಲಿಸಿಕೊಂಡವರು ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು ಹದಿನಾರನೇ ಶತಮಾನದಲ್ಲಿ ಪ್ರಬಲವಾಗಿರುವ ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದ ಭಕ್ತ ಎಂದರೆ ಕನಕದಾಸರು, ಭಕ್ತಿ ಕವಿತ್ವ ಮತ್ತು ಸಂಗೀತದಲ್ಲಿಯ ಸಾಧನೆಗೆ ಜಾತಿ ಎಂದೂ ತೊಡಕಾಗುವುದಿಲ್ಲ ಎಂದು ತಿಳಿಸಿಕೊಟ್ಟಿರುವ ಕನಕದಾಸರ ಜೀವನ ಮನುಜಕುಲಕ್ಕೆ ಮಾದರಿಯಾಗಿದೆ. ಕನಕದಾಸರು ಜಗತ್ತು ಕಂಡ ಸರ್ವಶ್ರೇಷ್ಠ ಚಿಂತನಕಾರರು ಅಲ್ಲದೆ ಸಮಾಜದ ಅಂಕು ಡೊಂಕುಗಳನ್ನು ತಮ್ಮ ಕೀರ್ತನೆಗಳ ಮೂಲಕ ಪರಿವರ್ತನೆ ಮಾಡಿದ ಹರಿಕಾರರು. ನಮ್ಮ ನಾಡು ಪ್ರಾಚೀನ ಕಾಲದಿಂದಲೂ ಋಷಿ–ಮುನಿಗಳ, ಸಾಧು–ಸಂತರ ನೆಲೆವೀಡು. ಕನಕದಾಸರು ಸಂತರು, ಹರಿದಾಸರು ಮತ್ತು ಕವಿಗಳು. ಈ ನಾಡಿನ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳ ಉನ್ನತಿಗೆ ಇವರ ಕೊಡುಗೆ ಅನುಪಮ ಮತ್ತು ಅನನ್ಯವಾದದ್ದು. ಹಾಗೆಯೆ ಇವರು ತಮ್ಮ ಕೀರ್ತನೆಗಳಲ್ಲಿ ಅನನ್ಯ ಭಕ್ತಿಯಿಂದ ಭಗವಂತನನ್ನು ಕೊಂಡಾಡಿ ದಾಸ ಶ್ರೇಷ್ಠರು ಎಂದು ಕರೆಯಿಸಿಕೊಂಡಿದ್ದಾರೆ. ಅಲ್ಲದೆ ಅವರು ಹರಿಭಕ್ತಸಾರ, ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯಚರಿತೆಗಳಂತಹ ಉತ್ತಮ ಕೃತಿಗಳನ್ನು ರಚಿಸಿ ಕವಿ ಶ್ರೇಷ್ಠರು ಎಂದು ಪ್ರಸಿದ್ಧರಾದರು. ಹುಟ್ಟಿನಿಂದ ಕೆಳವರ್ಗಕ್ಕೆ ಸೇರಿದ ಕನಕದಾಸರು ತಮ್ಮ ವಿಶಿಷ್ಟ ಗುಣಗಳಿಂದ, ಭಕ್ತಿ ವೈರಾಗ್ಯ ಕಾವ್ಯರಚನೆಯಿಂದ ವ್ಯಾಸರಾಯರ ಪ್ರಿಯ ಶಿಷ್ಯರಲ್ಲಿ ಒಬ್ಬರಾಗುವ ಯೋಗ್ಯತೆಯನ್ನು ಗಳಿಸಿಕೊಂಡು ದಾಸವರೇಣ್ಯರೆಂಬ ಗೌರವಕ್ಕೆ ಪಾತ್ರರಾದರು.

ಕನಕದಾಸರ ಕೀರ್ತನೆಗಳು ಭಾವಪೂರ್ಣವಾಗಿವೆ. ಈ ಕೀರ್ತನೆಗಳ ಮೂಲಕ ಭಗವಂತನಲ್ಲಿ ಭಕ್ತಿಯನ್ನು ಸಾರುವುದರ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಕೆಲವು ಅಸಾಂಪ್ರದಾಯಿಕ ಆಚರಣೆಗಳನ್ನು ಒರೆಗಲ್ಲಿಗೆ ಹಚ್ಚಿ ಪ್ರಶ್ನಿಸಿದ್ದಾರೆ. ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿಯ ಅವಶ್ಯಕತೆ ಇದೆ. ಅದು ಭಗವದ್ಭಕ್ತಿಯಿಂದ ಲಭಿಸುವುದು. ನಾಸ್ತಿಕತೆಯು ಮನುಷ್ಯನಲ್ಲಿ ತಲ್ಲಣವನ್ನು, ನಿರಾಸೆಯನ್ನು, ಭ್ರಮೆಯನ್ನು, ಹತಾಶೆಯನ್ನು ಉಂಟು ಮಾಡುತ್ತದೆ. ದೇವರಲ್ಲಿ ಅನನ್ಯ ಭಕ್ತಿಯನ್ನು ಸಾರುವ–

"ತಲ್ಲಣಿಸದಿರು ಕಂಡ್ಯ ತಾಳು ಮನವೆ,
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"

ಮುಂತಾದ ಅನೇಕ ಕೀರ್ತನೆಗಳನ್ನು ಕಾಣಬಹುದು. ಆದರೆ ಡಾಂಭಿಕ ಭಕ್ತಿಯನ್ನು ಅವರು ಎಂದೂ ಒಪ್ಪುತ್ತಿರಲಿಲ್ಲ.

"ಜಪವ ಮಾಡಿದರೇನು ತಪವ ಮಾಡಿದರೇನು, ವಿಪರೀತ ಕಪಟ ಗುಣಕಲುಷವಿದ್ದವರು'

**ಎಂದು ದೂಷಿಸಿದ್ದಾರೆ**

ಕನಕದಾಸರು ಸಮಾಜದ ಒಳಿತಿಗೆ ಧರ್ಮಾಚರಣೆಯ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಸಮಾಜದಲ್ಲಿ ಸತ್ಯ, ಧರ್ಮಗಳು ಮಾಯವಾಗುತ್ತಿರುವುದನ್ನು ನೋಡಿ ಮರುಗಿದ್ದಾರೆ: ಕನ್ನಡ ನಾಡು ಕಂಡ ಶ್ರೇಷ್ಠ ಭಕ್ತ ಕವಿ ದಾರ್ಶನಿಕ ಸಮಾಜ ಸುಧಾರಕ ಮಹಾ ಮಾನವತಾವಾದಿ ಕನಕದಾಸರು. ವರ್ಗ ವರ್ಣಗಳ ಸಂಘರ್ಷದಲ್ಲಿ ನಲುಗುತ್ತಿದ್ದ ಸಮಾಜವನ್ನು ತೆರೆದ ಹೃದಯ ಮತ್ತು ಮನಸ್ಸುಗಳಿಂದ ಕಂಡು ವರ್ಗ ವರ್ಣರಹಿತ ತಳಹದಿಯ ಮೇಲೆ ನಿರ್ಮಿಸಬೇಕೆಂಬ ಅವರ ಆಶಯವಾಗಿತ್ತು. ಇಹಲೋಕದ ಜಂಜಾಟಗಳಿಂದ ತತ್ತರಿಸಿದ ಮನುಕುಲಕ್ಕೆ, ವಿಶ್ವಮಾನವ ಸಮತಾವಾದದ ಸಿದ್ಧಾಂತವನ್ನು ಕೀರ್ತನೆಗಳ ಮೂಲಕ ಬೋಧಿಸಿದರು. ಆ ಕಾಲದ ಸಾಮಾಜಿಕ ವ್ಯವಸ್ಥೆಗೆ ಚಾತುರ್ವರ್ಣ ವ್ಯವಸ್ಥೆಯೇ ತಳಹದಿಯಾಗಿತ್ತು. ಕನಕದಾಸರು ಕೇವಲ ತಮ್ಮ ಸಾಹಿತ್ಯದಲ್ಲಿ ಜಾತಿಯನ್ನು ಕರಾಳತೆಯನ್ನು ಹೇಳಲಿಲ್ಲ ಬದಲಾಗಿ ಸ್ವತಃ ತಾವೂ ಅನುಭವಿಸಿದವರು.ವ್ಯಾಸರಾಯರು ತಮ್ಮ ಗರಡಿಯಲ್ಲಿ ಪ್ರವೇಶ ನಿರಾಕರಣೆ ಮಾಡುತ್ತಾರೆ. ಹಾಗೇ ಉಡುಪಿಯ ಶ್ರೀ ಕೃಷ್ಣನ ದೇವಾಲಯದಲ್ಲಿ ಕೀಳು ಕುಲದವರು ಎಂದು ಪ್ರವೇಶವನ್ನು ನಿಷೇಧಿಸಿದಾಗ ಅವರಿಗೆ ಭಕ್ತಿಮಾರ್ಗದಿಂದ ಕೃಷ್ಣನ ದರ್ಶನ ಕೂಡಾ ಆಗಬಹುದು ಎಂದು ತೋರಿಸಿಕೊಟ್ಟರು. ಕನಕನ ಕಿಂಡಿ ಕೇವಲ ಭಕ್ತಿಯ ಪರಾಕಾಷ್ಠೆಯ ಆಗದೇ ನಮ್ಮೆಲ್ಲರ ಎದುರಿಗಿದ್ದ ಜಾತಿಯ ಗೋಡೆಯನ್ನು ಒಡೆಯುವ ಕೆಲಸ ಮಾಡುತ್ತದೆ.

ಋಗ್ವೇದದ ಪುರುಷ ಸೂಕ್ತಕ್ಕೆ ಸಂಬಂಧಿಸಿದ ವರ್ಣಸಿದ್ದಾಂತಕ್ಕೆ ಅನುಗುಣವಾಗಿ ವರ್ಗೀಕರಿಸಲಾಗಿತ್ತು. ಇವರ ಮೂಲ ಗುಣಕರ್ಮ ಭಾಗಶಃ ಆದರೂ ಕಾಲಾಂತರದಲ್ಲಿ ಮೇಲು-ಕೀಳುಗಳೆಂಬ ವೃತ್ತಿಪರ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಕಾರಣವಾದವು. ಇದನ್ನು ಕಂಡ ಕನಕದಾಸರು ಕುಲದ ವಿಚಾರವಾಗಿ ಹೀಗೆ ತಿಳಿಸಿದ್ದಾರೆ.

"ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ"
ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು
ನಿರ್ಮಲವಿಲ್ಲದ ಮನಸು ಅದು ಕಜ್ಜಿ ತಿನಿಸು
ಸತ್ಯಧರ್ಮಗಳೆಲ್ಲ ಎತ್ತ ಪೋದವೊ ಕಾಣೆ
ಉತ್ತಮರ ಜೀವನಕೆ ದಾರಿಯಿಲ್ಲ
ನಿತ್ಯದಲಿ ಕಳವು ವ್ಯಭಿಚಾರವುಳ್ಳವರೆಲ್ಲ
ಅರ್ಥಸಂಪದರಾಗಿ ಅನುಭವಿಸುತಿಹರು.

ಹುಟ್ಟಿದ ಕುಲ ಮುಖ್ಯವಲ್ಲ ಗುಣಮುಖ್ಯ. ಉತ್ತಮ ಗುಣಗಳಿದ್ದರೆ ದೇವರು ಅಂಥವರ ಉದ್ಧಾರ ಮಾಡುತ್ತಾನೆ ಎಂಬುದನ್ನು ಸ್ವ ಅನುಭವದ ಮೂಲಕ ಜಗತ್ತಿಗೆ ತೋರಿಸಿಕೊಟ್ಟ ಮಹಾಮಹಿಮರು ಕನಕದಾಸರು. ಅದನ್ನು ಮಾರ್ಮಿಕವಾಗಿ ನಮ್ಮನ್ನು ಎಚ್ಚರಿಸಿದ ಪರಿಯಿದು.

ಕುಲಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ?
ಕುಲಕುಲ ಕುಲವೆನ್ನುತಿಹರೋ
ಕುಲವಾವುದು ಸತ್ಯ ಸುಜನರಿಗೆ

ಮೋಸದ ಜೀವನವನ್ನು, ಅನ್ಯಾಯದ ಜೀವನವನ್ನು ಕನಕದಾಸರು ಒಪ್ಪಿದವರಲ್ಲ. ಅಂತಹ ಜೀವನ ಅವನನ್ನೇ ನಾಶ ಮಾಡುತ್ತದೆ ಎಂದು ವಿಡಂಬನೆ ಮಾಡಿದ್ದಾರೆ:

ಮೋಸದಿ ಜೀವನ ಘಾಸಿ ಮಾಡಿದ ಪಾಪ
ಕಾಶಿಗೆ ಹೋದರೆ ಹೋದೀತೆ
ಶ್ರೀಶನ ಭಕುತರ ದೂಷಿಸಿದಾ ಫಲ
ಕಾಸು ಕೊಟ್ಟರೆ ಬಿಟ್ಟೀತೇ
ಭಾಷೆಯ ಕೊಟ್ಟು ನಿರಾಶೆಯ ಮಾಡಿದ ಫಲ
ಕ್ಲೇಶಗೊಳಿಸದೆ ಬಿಟ್ಟೀತೆ
ಭೂಸುರಸ್ವವ ಹ್ರಾಸ ಮಾಡಿದ ಫಲ
ಏಸೇಸು ಜನುಮಕು ಬಿಟ್ಟೀತೆ.
ನ್ಯಾಯವ ಬಿಟ್ಟ ನ್ಯಾಯವ ಪೇಳಲು
ನಾಯಿಗೆ ನರಕವು ತಪ್ಪೀತೆ.

ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ಹಾಗಾಗಿ ಇಂದು ಗಳಿಸಿದ ಸಂಪತ್ತನ್ನು ಅಸಹಾಯಕರಿಗೆ ದಾನಮಾಡಿದರೆ ಮುಂದೆಯೂ ಸುಖವಾಗಿರಬಹುದೆಂದು ದಾನದ ಮಹತ್ವವನ್ನು ತಿಳಿ ಹೇಳಿದ್ದನ್ನ ಕಾಣಬಹುದು.

ಇಷ್ಟ ಸಂಪತ್ತನ್ನು ಬಡವರಾ ಕರೆತಂದು
ಕೊಟ್ಟು ಮಾಡಿದ ಪುಣ್ಯಫಲ ತನ್ನದೋ
ಸೃಷ್ಟಿಯೊಳು ಕಾಗಿನೆಲೆಯಾದಿಕೇಶವನಂಘ್ರಿ
ಮುಟ್ಟಿ ಮನದಲಿ ಭಜಿಸೊ ಭ್ರಷ್ಟ ಜೀವನವೆ.

ತೊಂಬತ್ತು ವರ್ಷಗಳ ಕಾಲ ಸುದೀರ್ಘ ಸಾರ್ಥಕ ಜೀವನ ನಡೆಸಿದವರು ಕನಕದಾಸರು. ಅವರು ರಚಿಸಿದ ಕೀರ್ತನೆಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನರ್ಘ್ಯ ಮಾಣಿಕ್ಯಗಳೇ ಸರಿ. ನಿತ್ಯನೂತನತೆಯಿಂದ ಕೂಡಿರುವ ಈ ಕೀರ್ತನೆಗಳು ನಮಗೆ ಮಾರ್ಗದರ್ಶಕಗಳಾಗಿವೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಭಕ್ತಿ ಮೀಮಾಂಸೆಗೆ ಕೀರ್ತನೆಯ ದ್ರವ್ಯವನ್ನು ಒದಗಿಸಿದ ಸಂತ ಕನಕದಾಸರು, ಇವರ ಕೀರ್ತನೆಗಳು ಸಮಾಜವನ್ನು ಕಟ್ಟುವ ಹಾಗೂ ಸಾಮಾಜಿಕ ವಾಸ್ತವವನ್ನು ಅನುಸಂಧಾನ ಮಾಡುವ ನೆಲೆಯಿಂದ ಸತ್ಯಶೋಧನೆಯ ದಾರಿಯನ್ನು ಕಾಣಿಸುತ್ತದೆ. ಲೋಕವು ಅನೇಕ ಕೇಡುಗಳನ್ನು ಹೊಂದಿರುವ ಕಾರಣ ಆ ಕೇಡುಗಳಿಂದ ಸಮಾಜ ಹಾಗೂ ಮನುಷ್ಯನನ್ನು ಬಿಡಿಸುವ ಅಭಿವ್ಯಕ್ತಿಯೇ ಕೀರ್ತನೆಯ ಆಶಯವಾಗಿದೆ. ನಮ್ಮ ಸಾಮಾಜಿಕ ಪರಿಸರವು ಆಧುನಿಕತೆಯ ಪ್ರವೇಶದಿಂದ ಭ್ರಷ್ಟವಾಗಿ ಮೌಲ್ಯರಹಿತವಾದ ಸತ್ವವನ್ನು ಪಡೆದುಕೊಳ್ಳುತ್ತಿರುವಾಗ ಕನಕದಾಸರ ಕೀರ್ತನೆಯ ವಾಸ್ತವನ್ನು, ಸಾಮಾಜಿಕ ವಾಸ್ತವದೊಂದಿಗೆ ವಿವೇಚಿಸುವುದು ಅಗತ್ಯವೆಂದು ಕಾಣುತ್ತದೆ. ಸಮಾಜದ ವಾಸ್ತವನ್ನು ಗ್ರಹಿಕೆಯಾಗಿಸಿಕೊಂಡ ಕೀರ್ತನೆಗಳು ಲೋಕದ ಕೇಡುಗಳನ್ನು ಮೀರಿ ಮಾನವ ಪ್ರೀತಿಯನ್ನು ಕಟ್ಟುವ ಕಡೆಗೆ ತುಡಿಯುತ್ತದೆ. ಜಾತಿ, ಲಿಂಗ, ವರ್ಣಗಳನ್ನು ಮೀರಿ ಅನೇಕ ಅನುಭಾವಿಗಳಿಗೆ ಜೀವ ಸಂಬಂಧವನ್ನು ಕಟ್ಟುವ ನುಡಿಗಟ್ಟಾಗಿ, ಗಾದೆಯ ರೂಪವಾಗಿ ಕನಕನ ಕೀರ್ತನೆಯ ಸಾಲುಗಳು ಬಳಕೆಯಾಗಿವೆ. ಆದರೆ ಅವರಿಗೆ ಆ ಸಾಲುಗಳು ಕನಕನ ಕೀರ್ತನೆಗಳೆಂಬ ಅರಿವಿರುವುದಿಲ್ಲ. ಆ ಮಟ್ಟದಲ್ಲಿ ಕೀರ್ತನೆಗಳು ಜನಮಾನಸದಲ್ಲಿ ತುಂಬಿಕೊಂಡು ಸಮಾಜಕ್ಕೆ ಚಿಕಿತ್ಸೆ ನೀಡುವ ದ್ರಾವಕವಾಗಿ ಬಳಕೆಯಾಗುತ್ತಿರುವುದು ಕೀರ್ತನೆಯ ಹೆಚ್ಚುಗಾರಿಕೆಯನ್ನು ಗುರುತ್ತಿಸುತ್ತದೆ.

ಆಧುನಿಕ ಸಮಾಜವು ಪ್ರಕೃತಿಯ ಸತ್ಯವನ್ನು ಮೀರಿ, ಭೌತಿಕ ಸತ್ಯವನ್ನು ಶೋಧಿಸಿ ಅದರ ಹಿಂದೆಯೇ ಸುಖದ ಬದುಕನ್ನು ಕಟ್ಟಿಕೊಳ್ಳುವ ಭ್ರಮೆ. ಅಭಿವೃದ್ಧಿ ಪರಿಕಲ್ಪನೆಗಳು ಪ್ರಕೃತಿಯಿಂದ ಮಾನವನನ್ನು ದೂರಿಕರಿಸಿವೆ. ಪ್ರಕೃತಿಯ ಸತ್ವವು ಬದುಕಿನ ಮೀಮಾಂಸೆಯಾಗದೆ. ವ್ಯಕ್ತಿ ಸಮಸ್ಯೆಯ ಗೂಡಾಗಿ ಅನಾಥವಾಗುತ್ತ. ಒಂದಲ್ಲ ಒಂದು ಹತ್ಯೆ, ಹಿಂಸೆಗಳಿಗೆ ಗುರಿಯಾಗುತ್ತಿದ್ದಾನೆ. ಈ ನಡುವೆ ಉಂಟಾದ ಮಾನಸಿಕ ತಲ್ಲಣ ಹಾಗೂ ಪ್ರಕೃತಿಯ ತಲ್ಲಣವು ನಮ್ಮ ಬಾಳ್ವೆಯನ್ನು ನಾಶವಾಗಿಸುತ್ತದೆ ಎಂಬ ಎಚ್ಚರವನ್ನು ಕನಕದಾಸರು ಪ್ರಕೃತಿ ಮೀಮಾಂಸೆಯ ನೆಲೆಯಿಂದ ಗುರುತಿಸುತ್ತಾರೆ.

"ತಲ್ಲಣಿಸದಿರು ಕಂಡ್ಯ ತಾಳು ಮನವೆ.
ಎಲ್ಲಾವನು ಸಲಹುವನು ಇದಕ್ಕೆ ಸಂಶಯವಿಲ್ಲ"

ಕನಕದಾಸರು ನಮ್ಮ ಪರಂಪರೆಯ ತಾಳುವಿಕೆಯ ಸತ್ವವನ್ನೆ ಮಾನವ ಜೀವನಕ್ಕೆ ಮುಖಾಮುಖಿ ಮಾಡುವ ಮೂಲಕ ಬದುಕಿನ ದಾರಿಯನ್ನು ಪ್ರಕೃತಿಯೊಂದಿಗೆ ಸಮನ್ವಯ ಮಾಡುವ ಕಾರ್ಯವನ್ನು ಮಾಡುತ್ತಾರೆ.

ನಮ್ಮ ಸಮಾಜ ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿದ್ದ ಕಾರಣ ಕುಲ, ಜಾತಿ, ಧರ್ಮಗಳು ಮನುಷ್ಯನ ಬಂಧನಕ್ಕೆ ಕಾರಣವಾಗಿದ್ದವು. ಕುಲವೆನ್ನುವುದು ಜಾತಿರೂಪ ಪಡೆದು ಒಂದು ಪರಿಕಲ್ಪನೆಯಾಗಿ ಜೀವ ಪಡೆದಾಗ, ರಾಜ್ಯ ಕಟ್ಟುವ, ಯುದ್ಧ ಮಾಡುವ, ದೇವರನ್ನು ಅನುಸಂಧಾನ ಮಾಡುವ, ದಾನ ಧರ್ಮವನ್ನು ಪಡೆಯುವ ವಿಭಿನ್ನ ಸಾಂಸ್ಕೃತಿಕ ವಿಧಾನಗಳು ಕುಲವನ್ನು ಕೇಂದ್ರೀಕರಿಸಿದೆ. ಅದು ಸಾಮಾಜಿಕ ಸಂಘರ್ಷದ ವ್ಯವಸ್ಥೆಯಾಗಿದೆ. ಕನಕದಾಸರು ಕುಲದ ಪ್ರಜ್ಞೆಯನ್ನು ಜನರ ಅರಿವಿನ ಪ್ರಜ್ಞೆಯಾಗಿಸುವ ಮೂಲಕ ಕುಲವನ್ನು ಮೀರುವ ತಾತ್ವಿಕ ನೆಲೆಯನ್ನು ಕೀರ್ತನೆಯಲ್ಲಿ ಮಂಡಿಸುತ್ತಾರೆ. ಕನಕದಾಸರು ತಮ್ಮ ಜೀವಿತ ಕಾಲದಲ್ಲಿ ಮೂಲ ವೃತ್ತಿಯನ್ನು ಬಿಟ್ಟು ಭಕ್ತಿಯ ದಾರಿಯಲ್ಲಿ ಮುಕ್ತಿಯನ್ನು ಕಾಣಲು ಊರೂರು ಸಂಚರಿಸಿದರು. ಈ ಕಾಲಮಾನದಲ್ಲಿ ಕನಕದಾಸರಿಗೆ ಎದುರಾದ ಕುಲದ ಸಂಘರ್ಷವು ಕುಲವನ್ನು ಮೀರುವ ಹಾಗೂ ಕುಲದ ನೆಲೆಯಲ್ಲಿ ರೂಪಗೊಂಡಿರುವ ವ್ಯವಸ್ಥೆಯನ್ನು ದಾಟಿದಾಗ ಭಕ್ತಿಯ ಮಾರ್ಗ ಸಾಧ್ಯವಾಗುತ್ತದೆ ಎಂದು ಕುಲದ ಕುರಿತ ವಾಸ್ತವ ಗ್ರಹಿಕೆಯನ್ನು ವಿವೇಚಿಸುತ್ತಾರೆ.

"ಕುಲ ಕುಲವೆಂದು ಹೊಡೆದಾಡುವಿರಿ
ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ"

ಕೆಳವರ್ಗದ ಸಂತರಿಗೆ ಕುಲದ ಪ್ರಶ್ನೆ ಎದುರಾಗಿದ್ದು ಆ ಕಾಲಮಾನದ ಸಾಮಾಜಿಕ ವಾಸ್ತವದಿಂದ ಎಂದು ತೋರುತ್ತದೆ. ಕುಲದ ನೆಲೆಯಲ್ಲಿ ವ್ಯಕ್ತಿಗಳನ್ನು ಶ್ರೇಷ್ಟ, ಕನಿಷ್ಟವೆಂದು ವರ್ಗಿಕರಿಸಿ ಪ್ರಭುತ್ವವನ್ನು ಸಾಧಿಸಿ. ಒಂದು ಕುಲವನ್ನು ಗುಲಾಮತೆಯಾಗಿಸಿದ ಉನ್ನತ ಕುಲದವರಿಗೂ. ಕೀಳೆಂದು ಭಾವಿಸಿ ಸಾಮಾಜಿಕ ಅನಿಷ್ಟಗಳನ್ನು ತಲೆಯ ಮೇಲೆ ಇರಿಸಿಕೊಂಡಿರುವ ಕುಲದವರಿಗೂ. ಕುಲದ ಮೀಮಾಂಸೆಯನ್ನು ನಿರೂಪಿಸುವ ಕನಕದಾಸರು ಕುಲವನ್ನು ಮೀರುವ ನೆಲೆಯಿಂದ ಜೀವಪರತೆಯನ್ನು ಘನೀಕರಿಸುತ್ತಾರೆ.

ಮಧ್ಯಕಾಲೀನ ಸಂತರಿಗೆ ಭಕ್ತಿಯೇ ಬಿಡುಗಡೆಯ ದಾರಿಯಾಗಿ ಕಂಡಾಗ ಅದನ್ನು ಶೋಧಿಸಲು ಕೀರ್ತನೆಗಳನ್ನು ದ್ರವ್ಯವಾಗಿಸಿಕೊಳ್ಳುತ್ತಾರೆ. ಕನಕದಾಸರಿಗೆ ಆ ಕಾಲಮಾನದ ಪ್ರಭುತ್ವವನ್ನು ಅದರ ಧೋರಣೆಯನ್ನು ಮೀರಬೇಕಾದಾಗ, ಭಕ್ತಿಯೇ ಮೀರುವ ಸಾಧನವಾಯಿತು. ಕನಕದಾಸರ ಭಕ್ತಿ ಎನ್ನುವುದು ತನ್ನನ್ನು ಭವ, ಬಂಧನದಿಂದ ಬಿಡಿಸಿಕೊಳ್ಳುವುದು ಹಾಗೂ ದೇವರನ್ನು ಸಾಂಸ್ಕೃತಿಕ ಬಂಧನದಿಂದ ಬಿಡಿಸುವುದರ ಮಾರ್ಗವಾಯಿತು. ಭಕ್ತನ ಭಕ್ತಿ ಎನ್ನುವುದು ರಾಜನ ನಿರ್ದೇಶನದ ನೆಲೆಯಲ್ಲಿ ಅಭಿವ್ಯಕ್ತವಾಗುತ್ತಿತ್ತು ಅಂದರೆ ರಾಜ ಯಾವ ಧರ್ಮ, ಪಂಥವನ್ನು ನಂಬುವನೋ ಮತ್ತು ಭಕ್ತಿಯ ಸ್ವರೂಪವನ್ನು ಅದೇಶಿಸುವನೋ ಹಾಗೇಯೇ ರಾಜ್ಯದ ಜನರು ಭಕ್ತರಾಗಿ ದೇವರನ್ನು ಆರಾಧಿಸುವವರು ಏಕೆಂದರೆ ರಾಜನೆ ದೇವರು ಎನ್ನುವ ಪ್ರಭುತ್ವದ ಸಿದ್ಧಾಂತ. ಭಕ್ತಿಯನ್ನು ಬಂಧನದಲ್ಲಿ ಇರಿಸಿತ್ತು. ಸಾಮಾನ್ಯರಿಗೆ ಭಕ್ತಿಯು ಭಯದ ಸಂಕೇತವಾಗಿ ದೇವರು ಸಹ ಉನ್ನತ ವರ್ಗದ ರಾಜಕೇಂದ್ರಿತ ವ್ಯವಸ್ಥೆಯ ಒಳಗೆಯೇ ಚಲನೆಯನ್ನು ಪಡೆದುಕೊಂಡು ಸಾಮಾನ್ಯ ಜನರ ಮನಸಿಗೆ ನಿಲುಕದ ವಸ್ತುವಾಗಿದ್ದರು. ಭಕ್ತಿಯ ಪ್ರಭುತ್ವವನ್ನು ಸಾಧಿಸಿಕೊಂಡಿದ್ದ ಕೆಲವು ವರ್ಗಗಳು ಆ ಕಾಲಮಾನದಲ್ಲಿ ದೇವರನ್ನು ಬಂಡವಾಳವಾಗಿಸಿಕೊಂಡು ಸಂಘರ್ಷದಲ್ಲಿ ನಿರತರಾಗಿದ್ದಾಗ ಕನಕದಾಸರು ನೈಜ್ಯ ಭಕ್ತಿಯ ಶೋಧನೆಯನ್ನು ಮಾಡುವ ಅನುಭಾವಿಕ ನೆಲೆಯನ್ನು ತನ್ನದಾಗಿಸಿಕೊಂಡಿದ್ದು ಆ ಕಾಲಮಾನದ ಭಕ್ತಿಪಂಥದ ಬಹುದೊಡ್ಡ ಸಾಧನೆಯಾಗಿದೆ.

ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ
ಬರಿದು ಮಾತೀಕಿನ್ನು ಅರಿತು ಪೇಳುವೆನಯ್ಯ

ಕನಕದಾಸರು ಸಾಮಾಜಿಕವಾಗಿ ಅಸ್ಥಿತ್ವದಲ್ಲಿದ್ದ ಅನೇಕ ದೇವರು ಹಾಗೂ ದೈವಗಳನ್ನು ಮೀರಿ ಹರಿಯನ್ನು ಆರಾಧಿಸುತ್ತಾರೆ. ಈ ಆರಾಧನೆಯು ಜೀವನದ ಭಾಗವಾಗಿ ದೇವರನ್ನು ಅರಿತುಕೊಂಡು ಅನುರಕ್ತವಾಗುವ ಭಾವವೇ ಪ್ರಧಾನ ಸತ್ವವಾಗಿ ಸಮಾಜಕ್ಕೆ ಮಾದರಿಯಾಗುತ್ತದೆ. ಹಸಿವಿನ ಮೀಮಾಂಸೆಯನ್ನು ಅನುಸಂಧಾನ ಮಾಡುವ ಕನಕದಾಸರ ಕೀರ್ತನೆಗಳು ಹೊಟ್ಟೆ, ಬಟ್ಟೆಗಿಂತ ಮಿಗಿಲಾಗಿ ಬದುಕಬೇಕಾದ ತಾತ್ವಿಕತೆಯನ್ನು ಮಂಡಿಸುತ್ತದೆ. ಜನರು ಆ ಕಾಲಮಾನದಲ್ಲಿ ಭಕ್ತಿ ಮಾಡುತ್ತಿದ್ದದ್ದು ದೈವ, ದೇವರನ್ನು ಪೂಜಿಸುತ್ತಿದದ್ದು. ಹೊಟ್ಟೆ ಬಟ್ಟೆ ಹಾಗೂ ಸಂಸಾರದ ಚಾಲನೆಗಾಗಿ ಎಂಬ ಸಾಮಾಜಿಕ ವಾಸ್ತವನ್ನು ನಿರಾಕರಿಸುವ ಮೂಲಕ ಸಂಪತ್ತಿನ ಕ್ರೂಡೀಕರಣದ ನೆಲೆಗಳನ್ನು ಮೀರಿ ಭಕ್ತಿಯ ದಾರಿಯನ್ನು ಹಿಡಿಯಬೇಕೆಂಬ ಸತ್ವವು ದಟ್ಟವಾಗಿ ಕಾಣುತ್ತದೆ.

"ಎಲ್ಲಾರೂ ಮಾಡುವುದು ಹೊಟ್ಟೆಗಾಗಿ
ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ"

ಮಾನವನ ಜೀವನ ಹೊಟ್ಟೆ ಹಾಗೂ ಬಟ್ಟೆಗಿಂತ ಮೀರಿ ಸಾಧಿಸುವ ಅವಕಾಶವಿದೆ ಎಂಬ ಗುಣಾತ್ಮಕ ನಿಲುವನ್ನು ಸಮಾಜ ಒಳಗಡೆ ಸೇರಿಕೊಂಡಿದ್ದು, ಹೊಟ್ಟೆ ತುಂಬಿಸುವ ವಿಭಿನ್ನ ಡಾಂಭಿಕ ನೆಲೆಗಳನ್ನು ವಿಡಂಬಿಸುವ ಮೂಲಕ ಸಂಪತ್ತಿನ ಕೂಡಿಕೆಯನ್ನು ನಿರಾಕರಿಸುತ್ತಾರೆ. ಕನಕದಾಸರ ದಿನಮಾನದ ಚರಿತ್ರೆಯು ಸಂಪತ್ತನ್ನು ಕೇಂದ್ರೀಕರಿಸುವ ಮೂಲಕವೇ ಯುದ್ಧ, ಒಪ್ಪಂದ, ವ್ಯವಹಾರಗಳು ನಡೆದು ಬಂದಿತ್ತು. ಕನಕದಾಸರು ಸಹ ಸಂಪತ್ತಿನ ಕ್ರೂಢೀಕರಣದ ಜೀವನ ಸಂಸ್ಕೃತಿಯನ್ನು ಬಿಟ್ಟು ದಾಸರಿಂದ ಲೋಕದ ವಾಸ್ತವನ್ನು ಮೀರುವ ಮೂಲಕ ಕೇಡನ್ನು ದೂರಗಾಣಿಸುವ ಕಡೆಗೆ ನೋಡುತ್ತಾರೆ. ಕನಕದಾಸರು ಭವ ಬಂಧನವನ್ನು ಕಳೆದುಕೊಂಡು ಕೀರ್ತನೆಗಳನ್ನು ಹಾಡುತ್ತ ದಾಸರಾಗಿ ಸಂಚಾರ ಮಾಡುವಾಗ ಗ್ರಹಿಸಿದ್ದು ದಾನ, ಧರ್ಮಗಳು ಲೋಕದಲ್ಲಿ ಕೆಲವು ವರ್ಗಗಳಲ್ಲಿ ನೆಲೆಯಾಗಿದ್ದವು ಅಂದರೆ ರಾಜಕೇಂದ್ರಿತ ವ್ಯವಸ್ಥೆಯಲ್ಲಿ ರಾಜ ತಾನೇ ದೇವರೆಂಬ ಭ್ರಮೆಯಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರೀಯ ವರ್ಗಕ್ಕೆ ದಾನ ನೀಡುವ ಕಾರ್ಯವನ್ನು ಮಾಡುತ್ತಿದದ್ದು. ಇನ್ನೂಳಿದ ವರ್ಗಗಳು ದಾನವನ್ನು

ಪಡೆಯುವ ನೆಲೆಯನ್ನು ಕಳೆದುಕೊಂಡಿದ್ದವು. ಈ ನಡುವೆ ಸಮಾಜವು ನೈಜ್ಯವಾದ ಮೌಲ್ಯಗಳನ್ನು ಕಳೆದುಕೊಂಡು ಹಣವನ್ನು ಕೇಂದ್ರವಾಗಿಸಿಕೊಂಡು ನಡೆಯುವಾಗ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಸಮಾಜದ ನಡೆಯನ್ನು ಖಂಡಿಸುವ ಜೊತೆಗೆ ದಾನ, ಧರ್ಮದ ಮಹತ್ವವನ್ನು ಚರ್ಚಿಸುತ್ತಾರೆ.

"ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲ್ಲಿ ದಾನ, ಧರ್ಮವ ಮಾಡಿರಯ್ಯ"

ಕನಕದಾಸರ ಲೋಕಾನುಭವ ಹಾಗೂ ಸಂಸಾರದ ಶೂನ್ಯತೆಯು ಜೀವನದ ತಾತ್ವಿಕತೆಯಾಗಿ ಅಭಿವ್ಯಕ್ತವಾಗಿರುವ ಕೀರ್ತನೆಗಳು ದಾನ, ಧರ್ಮದ ಅಸ್ಮಿತೆಯನ್ನು ಲೋಕದಲ್ಲಿ ರೂಢಿಸುವ ಮೂಲಕ ಭಕ್ತಿಯನ್ನು ಜನರ ಮನಸಿಗೆ ಇಳಿಸುವ ನೆಲೆಯನ್ನು ಪರಂಪರೆಯ ಸತ್ವವನ್ನು ಗುಣಾತ್ಮಕವಾಗಿಯೇ ಕಾಪಿಟ್ಟುಕೊಳ್ಳುವುದನ್ನು ಗುರುತಿಸಬಹುದು.

ಅರಸನಂತೆ ಬಂಟನೋ, ಹನುಮರಾಯ
ದೊರೆಯಂತೆ ಸೇವಕನೋ

ಲೋಕದ ವಸ್ತು ಸ್ಥಿತಿಯನ್ನು ಸೂಕ್ಷ್ಮವಾಗಿ ನಿರೂಪಿಸಿದ ಅನುಭಾವಿ ಕನಕದಾಸರು. ರಾಜಪ್ರಭುತ್ವದ ನೆಲೆಯಲ್ಲಿ ಜನರ ಸ್ವಭಾವವು ರೂಪುಗೊಂಡಿತ್ತೆ ವಿನಹ: ಸ್ವಂತ ಚಿಂತನಾಶೀಲ ಬುದ್ಧಿ ಇರಲಿಲ್ಲ ಎಂಬ ತಾತ್ವಿಕತೆಯನ್ನು ಕೀರ್ತನೆಯ ಮೂಲಕ ನಿರೂಪಿಸುತ್ತಾರೆ. ರಾಜಪ್ರಭುತ್ವದ ಅಧಿಕಾರ ದಾಹ ಜನರನ್ನು ಬಳಸಿಕೊಳ್ಳುತ್ತಿದ್ದ ಬಗೆಯನ್ನು ವಿವೇಚಿಸುವ ಕನಕದಾಸರು ಸಾಮಾನ್ಯ ಜನರ ಸಂವೇದನೆಗಳನ್ನು ಸ್ಪರ್ಶಿಸಲು ಯೋಚಿಸುತ್ತಾರೆ. ವಾಸ್ತವ ಸಮಾಜದಲ್ಲಿ ಸಾಮಾಜಿಕ ಬದುಕಿಗೆ ಕೇಡನ್ನು ಉಂಟು ಮಾಡುವ ಪ್ರಮುಖರು ಅಂದರೆ, ರಾಜನ ಬಂಟರು ಎಂಬ ತಿಳುವಳಿಕೆಯ ಚರಿತ್ರೆಯ ಮೂಲಕವೇ ಗ್ರಹಿಸುತ್ತಾರೆ.ಈ ಗ್ರಹಿಕೆಯನ್ನು ಲೋಕದ ಮುಂದಿಡುವ ಕೀರ್ತನೆಯು ರಾಜಕೀಯ ಪ್ರಭುತ್ವವನ್ನು ವಿಶ್ಲೇಷಣೆ ಮಾಡುವ ಜೊತೆಗೆ ಮಾನವನ ಸ್ವಭಾವವನ್ನು ಅನುಸಂಧಾನಕ್ಕೆ ಒಳಗು ಮಾಡುತ್ತದೆ.

ಜಪವ ಮಾಡಿದರೇನು, ತಪವ ಮಾಡಿದರೇನು
ವಿಪರೀತ ಕಪಟಗುಣ ಕಲುಷವಿದ್ದವರ

ದೇವರ ಆರಾಧನೆ ಹಾಗೂ ಭಕ್ತಿಯ ಸ್ವರೂಪವು ಭವ ಬಂಧನವನ್ನು ಕಳೆಯದೆ ಕೇವಲ ಬಾಹ್ಯ ನಿರೂಪಣೆಯ ಭಕ್ತಿಯಾಗಿ ಜಪ, ತಪ, ಪೂಜೆ ಹಾಗೂ ಸನ್ಯಾಸಗಳೆಂಬುವುದು ಕಾಮವನ್ನು ಪೂರೈಕೆ ಮಾಡಿಕೊಳ್ಳುವ ಸಾಧನಗಳಾಗಿ ಸಮಾಜದ ಆರೋಗ್ಯವನ್ನು ಪಲ್ಲಟಗೊಳಿಸುತ್ತಿದ್ದ ಸಂದರ್ಭದ ಸಮಾಜದ ವಾಸ್ತವ ಅಭಿವ್ಯಕಿಯನ್ನು ಗುರುತಿಸುವ ಕನಕದಾಸರು ಜಪ, ತಪದ ಭ್ರಷ್ಟತೆಯ ಗ್ರಹಿಕೆಯನ್ನು ಕೀರ್ತನೆಯ ಮೂಲಕ ನಿರೂಪಿಸುವ ಜೊತೆಗೆ ಭಾರತೀಯ ಪರಂಪರೆಯ ನೆಲೆಯಿಂದ ಜಪ, ತಪ ಹಾಗೂ ದೈವಿಕ ಮೀಮಾಂಸೆಯ ಗುಣಾತ್ಮಕತೆಯನ್ನು ಲೋಕದ ಮುಂದಿಡುವ ಮೂಲಕ ಅಧ್ಯಾತ್ಮಿಕ ನೆಲೆಯ ಅರ್ಥವನ್ನು ಬಹುತ್ವವಾಗಿಸುವ ಕಡೆಗೆ ಹೆಜ್ಜೆ ಹಾಕುವುದನ್ನು ಕಾಣಬಹುದು.

ನೀ ಮಾಯೆಯೊಳಗೊ
ನಿನ್ನೊಳು ಮಾಯೆಯೊ
ನೀ ದೇಹದೊಳಗೋ, ನಿನ್ನಳು ದೇಹವೋ ಹರಿಯೇ

ಮಾಯೆಯ ಕುರಿತಂತೆ ಅನೇಕ ಸಂತರು ಪ್ರತಿಕ್ರಿಯಿಸಿದ್ದಾರೆ. ಮಾಯೆ ಎಂಬುವುದನ್ನು ಹೆಣ್ಣು ಎಂದು. ಚಂಚಲವಾದ ಜಗತ್ತು ಎಂದು ಬಹುನೆಲೆಯಲ್ಲಿ ಅನುಸಂಧಾನ ಮಾಡಿದೆ. ಆದರೆ ಕನಕದಾಸರು ದೇಹ ಹಾಗೂ ದೇವರ ನೆಲೆಯನ್ನು ಮಾಯೆ ಎಂದು ಗ್ರಹಿಸುವ ಜೊತೆಗೆ ಈ ಮಾಯೆಯನ್ನು ಕಳೆದು ದೇವರಲ್ಲಿ ಒಂದಾಗುವ ಕಡೆಗೆ ವಿವೇಚಿಸುತ್ತಾರೆ. ಆ ಕಾಲಮಾನದ ಸಾಮಾಜಿಕ ವಾಸ್ತವವು ಪ್ರಕೃತಿಯನ್ನು, ದೇವರನ್ನು ಮಾಯೆ ಎಂಬ ನೆಲೆಯಲ್ಲಿ ಗ್ರಹಿಸಿತ್ತು. ದೇವರನ್ನು ಸಂಪ್ರದಾಯದ ನೆಲೆಯಲ್ಲಿ ದೇವಾಲಯದಲ್ಲಿಟ್ಟು ಸಾಮಾನ್ಯರಿಗೆ ದೇವರು ಮಾಯೆಯ ರೂಪಿಯಾಗಿದ್ದಾನೆಂದು ವಿವರಿಸಿದ ಕೆಲವು ಡಾಂಭಿಕ ಜನರು ತಮ್ಮ ದೇವರನ್ನು ಮಾಯೆ ಎಂದು ತಿಳಿದುಕೊಂಡು ದೇವರ ಸ್ಪರ್ಶವನ್ನು ನೈಜ್ಯವಾದ ಭಕ್ತಿಯ ಅಭಿವ್ಯಕ್ತಿಯನ್ನು ಕಳೆದುಕೊಂಡು, ಭವ ಬಂಧನದಲ್ಲಿ ಕಳೆಯುತ್ತಿದ್ದ ಪರಿಸರದಲ್ಲಿ ಕನಕದಾಸರು ಮಾಯೆಯಿಂದ ದೇವರನ್ನು, ಜನರನ್ನು ಬಿಡಿಸಿ. ಅದ್ವೈತ ಮೀಮಾಂಸೆಯನ್ನು ಜನರ ಮುಂದಿಡುವ ಮೂಲಕ ದೇವರು ಎಲ್ಲರ ದೇಹದೊಳಗೆ ಇದ್ದಾನೆ ಹಾಗೂ ನಾವು ದೇವರ ಪ್ರಜ್ಞೆಯನ್ನು ನಮ್ಮೊಳಗೆ ಜಾಗೃತವಾಗಿಸಿಕೊಳ್ಳುವ ನೆಲೆಯಲ್ಲಿ ದೇವರ ಅಸ್ಮಿತೆಯನ್ನು ಕಾಣಬಹುದೆಂಬ ಭಕ್ತಿಯ ಸ್ವರೂಪವನ್ನು ಕೀರ್ತನೆಯ ಮೂಲಕ ಅಭಿವ್ಯಕ್ತಿಸುತ್ತಾರೆ.

ಕನಕದಾಸರು ಸಾಮಾಜಿಕ ಚಳುವಳಿಯನ್ನು ಕೀರ್ತನೆಯ ಮೂಲಕ ಮಾಡಿದ್ದರಲ್ಲದೆ ದುಡಿಯುವ ವರ್ಗಗಳ ಸಂವೇದನೆಯನ್ನು ಕೇಂದ್ರಿಕರಿಸುವ ನೆಲೆಯಿಂದ ಸಮಾಜದ ಕೇಡನ್ನು ಕಳೆಯಲು ಮಾನವಿಯ ಮೌಲ್ಯಗಳನ್ನು ಜೀವನ ಮೀಮಾಂಸೆಯ ಮೂಲಕ ತಾತ್ವಿಕರಿಸುತ್ತಾರೆ, ಸಾಮಾಜಿಕ ವಾಸ್ತವವನ್ನು ಚಿಕಿತ್ಸೆ ದೃಷ್ಟಿಯಿಂದ ನೋಡುವ ಕನಕದಾಸರು ಜಾತಿ, ಧರ್ಮ, ಲಿಂಗ–ಬೇಧವನ್ನು ಮೀರಿ ಸಾಮಾನ್ಯತೆಯನ್ನು ನಿರೂಪಿಸುವ ಜೊತೆಗೆ ದೇವರ ನೆಲೆಯನ್ನು ಭಕ್ತನ ಭಕ್ತಿಯ ಜೊತೆಗೆ ಮುಖಾಮುಖಿಯಾಗಿಸುವ ಮೂಲಕ ರಾಜಕೇಂದ್ರಿತ ಭಕ್ತಿಯ ಸ್ವರೂಪವನ್ನು, ಪ್ರಭುತ್ವದ ಧೋರಣೆಯನ್ನು ದಾಟುವ ನಡೆಯಿಂದ ಕನಕದಾಸರ ಕೀರ್ತನೆಗಳು ಪ್ರಸ್ತುತವಾಗಿ ಕಾಣುತ್ತದೆ.

ನವಸಮಾಜ ನಿರ್ಮಾಣಕ್ಕೆ ಸಮಾನತೆಯನ್ನು ಸಾರಲು, ವರ್ಗ–ವರ್ಣ ವ್ಯವಸ್ಥೆಗೆ ಎದಿರೇಟು ನೀಡಿದ್ದು, ವಿಶ್ವಸಂದೇಶವನ್ನು ಸಾರಿವೆ ಎಂಬುದನ್ನು ಸರ್ವರೂ ಒಪ್ಪಿಕೊಳ್ಳಬೇಕಾದ ವಿಚಾರವಾಗಿದೆ. ಅಸಮಾನತೆಯ ವಕ್ತಾರರನ್ನು ಪ್ರಶ್ನಿಸುವಾಗ ಅವರು ಬಳಸುವ ನಿದರ್ಶನಗಳೆಲ್ಲವೂ ದೇವರನ್ನು ಕೇಂದ್ರವಾಗಿಸಿಕೊಂಡಿದ್ದರಿಂದ ಒದಗಿದ ತಿಳುವಳಿಕೆ ಕೂಡಾ ಹೌದು ಎನ್ನುವುದನ್ನು ಮರೆಯುವಂತಿಲ್ಲ.

ಅವರ ಮೌಖಿಕ ಸಾಹಿತ್ಯವು ಕೀರ್ತನೆ ಭಜನೆಗಳ ರೂಪಗಳಲ್ಲಿ ಸಮಾಜದ ಏರು ಪೇರುಗಳನ್ನು ಕರಿಯ–ಬಿಳಿಯ, ಸತ್ಯ–ಅಸತ್ಯಗಳನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಮಾಡಿವೆ. ಮತ್ತು ಸದಾಚಾರ ಮಾರ್ಗವನ್ನು ತೋರಿಸಿವೆ. ಸಾಮಾಜಿಕ ಆಂದೋಲನಗಳಲ್ಲಿ ಎಲ್ಲ ದಾಸರೂ ಭಾಗಿಗಳಾಗಿ ಸರ್ವರೂ ಒಪ್ಪಿಕೊಳ್ಳುವ ಜೀವನ ಮೌಲ್ಯಗಳನ್ನು ಜನರ ಹೃದಯಗಳಿಗೆ ಕೀರ್ತನೆಗಳ ಮೂಲಕ ತಲುಪುವಂತೆ ಮಾಡಿದ್ದಾರೆ.

"ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲವೊ
ಗುಟ್ಟು ಕಾಣಿಸೆ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ"

ನಮ್ಮ ಭೌತಿಕ ಕಾಯದ ಪಾಡುಗಳನ್ನು ಈ ಮಾತುಗಳು ವಿವರಿಸುತ್ತವೆ. ಭೂಮಿಯಲ್ಲಿಯ ಎಲ್ಲಾ ಜೀವಿಗಳ ಹುಟ್ಟು ಸಾವಿನಲ್ಲಿ ವ್ಯತ್ಯಾಸಗಳೇನೂ ಇರವು; ಆದರೆ ಈ ವಿದ್ಯಮಾನದ ನೆಲೆ ಬೆಲೆಗಳು ನಮಗೆ ತಿಳಿದಿದೆಯೇ? ಸೃಷ್ಟಿಯ ಹಿಂದಿರುವ ಗುಟ್ಟುಗಳ ಅರಿವು ನಮಗಿಲ್ಲ; ಜನನ ಮರಣ ಅದರ ನಡುವೆ, ಊಟ, ಕೂಟಗಳ, ಆಟದ ಪ್ರೇಕ್ಷಕರಷ್ಟೆ ನಾವು. ಹೀಗಿರುವಾಗ ಎಲ್ಲವನ್ನು ತಿಳಿದಿರುವ ಎಲ್ಲವನ್ನು ನಿಯಂತ್ರಿಸುವ 'ಸರ್ವಜ್ಞ'ನನ್ನು ನಾವು ಮನನ ಮಾಡಿದರೆ ಆಗ ಸಹಜವಾಗಿಯೇ ನಮ್ಮ ಶ್ರೇಷ್ಠ ಕನಿಷ್ಠಗಳ ಸೀಮಿತ ಲೆಕ್ಕಾಚಾರ ಕೊನೆಯಾಗದಿದ್ದೀತೆ? ಕುಲವನ್ನು ನಿರಾಕರಿಸಲು ಕನಕದಾಸರಿಗೆ ಒದಗಿದ ಮೊದಲ ವಿಚಾರ ನಮ್ಮ ಗೋಚರ ಪ್ರಪಂಚಕ್ಕೆ ಸೇರಿದ ವಿವರಗಳು.

ಕನ್ನಡ ನಾಡು ಕಂಡ ಶ್ರೇಷ್ಠ ಭಕ್ತ ಕವಿ ದಾರ್ಶನಿಕ ಸಮಾಜ ಸುಧಾರಕ ಮಹಾಮಾನವತಾವಾದಿ ಕನಕದಾಸರು. ವರ್ಗ ವರ್ಣಗಳ ಸಂಘರ್ಷದಲ್ಲಿ ನಲುಗುತ್ತಿದ್ದ ಸಮಾಜವನ್ನು ತೆರೆದ ಹೃದಯ ಮತ್ತು ಮನಸ್ಸುಗಳಿಂದ ಕಂಡು ವರ್ಗ ವರ್ಣರಹಿತ ತಳಹದಿಯ ಮೇಲೆ ನಿರ್ಮಿಸಬೇಕೆಂಬ ಅವರ ಆಶಯವಾಗಿತ್ತು. ಇಹಲೋಕದ ಜಂಜಾಟಗಳಿಂದ ತತ್ತರಿಸಿದ ಮನುಕುಲಕ್ಕೆ, ವಿಶ್ವಮಾನವ ಸಮತಾವಾದದ ಸಿದ್ಧಾಂತವನ್ನು ಕೀರ್ತನೆಗಳ ಮೂಲಕ ಬೋಧಿಸಿದರು. ಆ ಕಾಲದ ಸಾಮಾಜಿಕ ವ್ಯವಸ್ಥೆಗೆ ಚಾತುರ್ವರ್ಣ ವ್ಯವಸ್ಥೆಯೇ ತಳಹದಿಯಾಗಿತ್ತು. ಕನಕದಾಸರು ಕೇವಲ ತಮ್ಮ ಸಾಹಿತ್ಯದಲ್ಲಿ ಜಾತಿಯನ್ನು ಕರಾಳತೆಯನ್ನು ಹೇಳಲಿಲ್ಲ ಬದಲಾಗಿ ಸ್ವತಃ ತಾವೂ ಅನುಭವಿಸಿದವರು.ವ್ಯಾಸರಾಯರು ತಮ್ಮ ಗರಡಿಯಲ್ಲಿ ಪ್ರವೇಶ ನಿರಾಕರಣೆ ಮಾಡುತ್ತಾರೆ. ಹಾಗೇ ಉಡುಪಿಯ ಶ್ರೀ ಕೃಷ್ಣನ ದೇವಾಲಯದಲ್ಲಿ ಕೀಳು ಕುಲದವರು ಎಂದು ಪ್ರವೇಶವನ್ನು ನಿಷೇಧಿಸಿದಾಗ ಅವರಿಗೆ ಭಕ್ತಿಮಾರ್ಗದಿಂದ ಕೃಷ್ಣನ ದರ್ಶನ ಕೂಡಾ ಆಗಬಹುದು ಎಂದು ತೋರಿಸಿಕೊಟ್ಟರು. ಕನಕನ ಕಿಂಡಿ ಕೇವಲ ಭಕ್ತಿಯ ಪರಾಕಾಷ್ಠೆಯ ಆಗದೇ ನಮ್ಮೆಲ್ಲರ ಎದುರಿಗಿದ್ದ ಜಾತಿಯ ಗೋಡೆಯನ್ನು ಒಡೆಯುವ ಕೆಲಸ ಮಾಡುತ್ತದೆ.

ಋಗ್ವೇದದ ಪುರುಷಸೂಕ್ತಕ್ಕೆ ಸಂಬಂಧಿಸಿದ ವರ್ಣಸಿದ್ಧಾಂತಕ್ಕೆ ಅನುಗುಣವಾಗಿ ವರ್ಗೀಕರಿಸಲಾಗಿತ್ತು. ಇವರ ಮೂಲ ಗುಣಕರ್ಮ ಭಾಗಶಃ ಆದರೂ ಕಾಲಾಂತರದಲ್ಲಿ ಮೇಲು–ಕೀಳುಗಳೆಂಬ ವೃತ್ತಿಪರ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಕಾರಣವಾದವು. ಇದನ್ನು ಕಂಡ ಕನಕದಾಸರು ಕುಲದ ವಿಚಾರವಾಗಿ "ಕುಲ ಕುಲವೆಂದು ಹೊಡೆದಾಡುವಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ" ಎಂಬ ಕೀರ್ತನೆಯನ್ನು ಮೇಲಿಂದ ಮೇಲೆ ನಮ್ಮ ವ್ಯವಹಾರಗಳಲ್ಲಿ ಉಲ್ಲೇಖಿಸುತ್ತಿರುತ್ತೇವೆ. ಕುಲ ಮತ್ತು ಸಾಮಾಜಿಕ ಸಂಬಂಧಗಳ ಬಗ್ಗೆ

ಕನಕದಾಸರು ತಮ್ಮ ಕಾಲದಲ್ಲಿ ಏನು ಕಂಡಿದ್ದರು. ಎಂಬುದಕ್ಕಿಂತ ಕೀರ್ತನೆಯನ್ನು ಮತ್ತು ಅದರ ಸಾಲುಗಳನ್ನು ಉಲ್ಲೇಖಿಸುವ ನಾವು ನಮ್ಮ ಜೀವನದ ಬಗ್ಗೆ ಯಾವ ವ್ಯಾಖ್ಯಾನವನ್ನು ಮಾಡಿಕೊಳ್ಳುತ್ತಿದ್ದೇವೆ ಎಂಬುದು ಇಲ್ಲಿ ಮುಖ್ಯವೆಂಬುದು ನನ್ನ ಭಾವನೆ, ಅಂದರೆ ಆ ಕೀರ್ತನೆಯ ಉಲ್ಲೇಖ ನಮ್ಮ ಸಾಮಾಜಿಕ ಚಿಂತನೆಯ ಸ್ವರೂಪವನ್ನು ಪ್ರಕಟಿಸಲು ನೆರವಾಗುತ್ತದೆ. ಯಾವ ಮೌಲ್ಯ ವ್ಯವಸ್ಥೆ ಮತ್ತು ಮೌಲ್ಯ ಶ್ರೇಣಿಗಳಲ್ಲಿ ನಾವು ಬದುಕುತ್ತಿದ್ದೇವೋ ಅದು ಇಂಥ ಉಲ್ಲೇಖಗಳ ಮೂಲಕ ನಮಗೆ ಗೋಚರವಾಗುತ್ತದೆ.

ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ ಆ
ಜಲದ ಕುಲವನೇನಾದಾರೂ ಬಲ್ಲಿರಾ
ಜಲದ ದೊಬ್ಬೂಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯನರಿತು ನೀ ಹರಿದು ನೆನೆ ಮನುಜ

ಸೃಷ್ಟಿ ಕ್ರಮದಲ್ಲಿ ಯಾವುದು ಹುಟ್ಟಿತು ಎಂಬ ಎಣಿಕೆಯ ನಡೆಯುತ್ತಲೇ ಬಂದಿದೆ. ಈ ಎಣಿಕೆಯಲ್ಲಿ ಪರಿಣಾಮವಾದವೋ ವಿಕಾಸವಾದವೊ ಯಾವ ವಾದವೇ ಆಗಿರಲಿ, ಅದು ಯಾವುದೋ ಒಂದು ಮೂಲ ವಸ್ತುವಿಗೆ ಬಂದು ನಿಲ್ಲಲೇಬೇಕು. ಸೃಷ್ಟಿಯ ಮೂಲ ನೀರು ಎನ್ನುವುದು ಅಂಥದೊಂದು ಎಣಿಕೆ. ಇದನ್ನು ಒಪ್ಪೋಣ: ಹೀಗೆ ಒಪ್ಪಿದರೂ ಪ್ರಶ್ನಾಪರಂಪರೆ ಅಲ್ಲಿಗೆ ನಿಲ್ಲದು; ಆ ನೀರಿನ ಮೂಲ ಯಾವುದು? ಇದಕ್ಕೆ ಉತ್ತರವನ್ನು ಹೇಳಬಲ್ಲವರು ಯಾರು? ಕುಲದ ಘೋಷಣೆ, ತಾನೆ? ನಮ್ಮೆಲ್ಲರಿಗೂ ಮೂಲವಾಗಿರುವ ನೀರಿನ ಮೂಲವೇ ನಮಗೆ ಗೊತ್ತಿಲ್ಲ; ಹೀಗಾಗಿ ನಮ್ಮ ಕುಲಗಳ ಘೋಷಣೆಯಲ್ಲಿ ಎಷ್ಟು ಖಚಿತತೆ ಇದ್ದೀತು? ಕನಕದಾಸರು ಜಲವನ್ನು 'ತಾಯಿ' ಎಂದು ಕರೆದಿರುವುದು ಇಲ್ಲಿ ಧ್ವನಿ ಪೂರ್ಣವಾಗಿದೆ.

ನಮ್ಮ ತಿಳಿಗೇಡಿತನದ ವಿಕೃತ ಬುದ್ಧಿಯು ಎಲ್ಲ ಕೊಳೆಯನ್ನು ತೊಳೆದು ಹಾಕಲು ನೀರೆಂಬ ತಾಯಿಯನ್ನು ಅವರು ಬಳಸಿಕೊಳ್ಳುತ್ತಿರುವುದು ಮನನೀಯವಾಗಿದೆ. ನೀರಿನ ಮೂಲವನ್ನು ಕಂಡು ಹಿಡಿಯಲಾಗಿದ್ದ ನಮ್ಮ ಮಂದಮತಿಗೆ ಆ ನೀರಿನ ಶರೀರವೇ ಇಂಥ ಹುಡುಕಾಟದ ಸಾಪೇಕ್ಷತನವನ್ನೂ ನಶ್ವರತೆಯನ್ನೂ ಪ್ರಕಟಿಸುತ್ತಿರುವ ದೃಕ್–ದೃಶ್ಯ ವಿವೇಕವಾಗಿದೆ ಎನ್ನುವುದನ್ನು ಅವರು ತಿಳಿಸಿಕೊಡುತ್ತಿದ್ದಾರೆ.

"ಏನೆಂತೆಂದೊಲಿವೆ ನಿನ್ನವರಂತೆ ಕೇಡಬುದ್ದಿ ಎನ್ನೊಳಿಲ್ಲ
ಗುಣಹೀನರಲ್ಲದೆ ದೀನರ ಪಾಲಿಪ ಬುದ್ದಿ ನಿನ್ನೊಳಿಲ್ಲ
ತರಳ ಪ್ರಹ್ಲಾದನಂದದಿ ನಿನ್ನ ರೂಪವ ಕೆಡಿಸಲಿಲ್ಲ
ನರನಂತೆ ಬಂಡಿಯ ಬೋಧನ ಮಾಡಿ ನಾ ಹೊಡೆಸಲಿಲ್ಲ
ಆತ್ಮನಿವೇದನಾಭಕ್ತಿ"

ಆತ್ಮನಿವೇದನವು ಎಲ್ಲದಕ್ಕಿಂತ ಹಿರಿದಾಗಿರುವುದು ಎಂದು ಕೀರ್ತನಾಚಾರ್ಯ ಬೇಲೂರು ಕೇಶವದಾಸರು ಹೇಳಿದ್ದಾರೆ.

"ಉದಯಾಸ್ತಮಾನವೆಂಬ ಎರಡು ಕೊಳಗವ ಮಾಡಿ
ಆಯುಷದ ರಾಸಿಯನು ಅಳೆಯಿರಯ್ಯಾ॥
ಇದು ಕಾರಣ ಕಾಗಿನೆಲೆಯಾದಿಕೇಶವನ॥
ಮುದದಿಂದ ನೆನೆನೆದು ಸುಖಿಯಾಗಿರಯ್ಯಾ

ನಮ್ಮ ಜೀವನದ ಪೂರ್ತಿ ಕೃಷಿ ಮಾಡಿ ಒಟ್ಟು ಮಾಡಿದ ಧಾನ್ಯದ ರಾಶಿಯೆಂದರೆ ಅದು ನಮ್ಮ ಜೀವನವಲ್ಲದೆ ಬೇರಲ್ಲ. ಇದನ್ನು ಅಳೆಯುವ ಕೊಳಗ ಎಂದರೆ ಉದಯ ಅಸ್ತಮಾನ: ಎಂದರೆ ನಮ್ಮ ನಿತ್ಯದ ಬದುಕು. ನಾವು ಅಳೆಯ ಬೇಕಾದದ್ದು ನಾರಾಯಣ ಎಂಬ ಧಾನ್ಯವನ್ನು ನಮ್ಮ ಹೃದಯದಲ್ಲಿ ಎಷ್ಟು ಬೆಳೆದಿದ್ದೇವೆ ಎನ್ನುವದನ್ನು

'ನೆನೆನೆನೆದು'

ಎನ್ನುವಾಗ ಅಳೆಯುವ ಪ್ರಕ್ರಿಯೆಯ ನಿರಂತರತೆಯನ್ನೆ ಅಭಿನಯಿಸಿದಂತಾಗುತ್ತದೆ. ಬೆಳೆ ಹೆಚ್ಚು ಬೆಳೆದಷ್ಟು ಕೃಷಿಕನಿಗೆ ಸಂತೋಷ; ಸುಖ; ಅಂತೆಯೇ ಆದಿಕೇಶವನನ್ನು ನೆನೆದಷ್ಟು ಋಷಿಗೆ ಸಂತೋಷ; ಸುಖ ಅಂತರಂಗದ ಕೃಷಿಕಾರನೇ ದಿಟನಾದ ಋಷಿ ಎನ್ನುತ್ತಿದ್ದಾರೆ. ಮೇಲುನೋಟಕ್ಕೆ ಜೀವನದ ತತ್ವ ಸಾರವನ್ನು ಹೇಳುವ ಅವರ ಜನಪ್ರಿಯ ಕೀರ್ತನೆಯಾದ

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ತುತ್ತು ಹಿಟ್ಟಿಗಾಗಿ ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

ಎಂಬ ಕೀರ್ತನೆಯೂ ಸಹ ಆಲಯವನ್ನು ಬಿಡಿಸಿಕೊಳ್ಳುವುದರ ಕಡೆಗಿನ ದಾಸರ ನಿರಾಕರಣೆಯ ಕಥನವನ್ನು ಹೇಳುತ್ತದೆ.

"ಜಪವ ಮಾಡಿದರೇನು, ತಪವ ಮಾಡಿದರೇನು
ಕಪಟ ಗುಣ ವಿಪರೀತ ಕಲುಷವಿದ್ದವರು"

ಎಂದು ಯಾವ ನೇಮ,ಜಪ ತಪ ಮಾಡಿದರು ಫಲವಿಲ್ಲವೆಂದು ಹೇಳುತ್ತಲೇ

"ನೇಮವಿಲ್ಲದ ಹೋಮವೇತಕಯ್ಯಾ"
ಎಂದು ಢಾಂಬಿಕ ಭಕ್ತಿಯನ್ನು ಖಂಡಿಸುತ್ತಾರೆ.

ಮೇಲ್ವರ್ಗದವರು ಜಾತಿಯನ್ನು ತಮ್ಮ ಹಿರಿಮೆಗೆ ಅಂತಸ್ತಿಗೆ ಅಸ್ತ್ರವಾಗಿ ಬಳಸಿಕೊಂಡರೆ, ಕನಕದಾಸರು ಜಾತಿಯ ಬಳಕೆ ಅಪಾಯವೆಂದು; ಮನುಷ್ಯಕುಲದ ಅನಿಷ್ಟವೆಂದು ವಿರೋಧಿಸಿದರು. ಆದರೆ ಜಾತಿಯ ಸಾಂಸ್ಕೃತಿಕ ಅಸ್ಮಿತೆಯನ್ನು ತಮ್ಮ ಕಾವ್ಯಗಳಲ್ಲಿ ಅಲ್ಲಲ್ಲಿ ಸ್ಪರ್ಶಿಸುವುದನ್ನು ಕೈಬಿಡಲಿಲ್ಲ. ಅವರು ಜಾತಿಯನ್ನು ಭೇದಿಸಿದ ರೀತಿ ಆಶ್ಚರ್ಯವೆನಿಸುತ್ತದೆ. ಕನಕದಾಸರನ್ನು ಸುತ್ತುವರಿದ ಕತೆಗಳು, ಐತಿಹ್ಯಗಳೂ ಈ ಮೂಲವನ್ನು ನೆನಪಿಸುತ್ತವೆ.

ಹೀಗೆ ಹರಿದಾಸ ಸಾಹಿತ್ಯದಲ್ಲಿ ಮೊಟ್ಟ ಮೊದಲು ಹರಿದಾಸ ಕೀರ್ತನೆ ಎಂದು ಪ್ರಖ್ಯಾತಿಯಾದವರು 'ಎಂತು ಮರುಳಾದೆ ನಾನೆಂತು ಮರುಳಾದೆ', ಮತ್ತು 'ಹರಿಯೇ ಇದು ಸರಿಯೇ!' "ಚರಣ ಸೇವಕನಲ್ಲಿ ಕರುಣ ಬಾರದ್ಯಾಕೆ" ಎಂದು ತಮ್ಮ ಕೀರ್ತನೆಗಳಲ್ಲಿ ಹರಿಗೆನೇ ಪ್ರಶ್ನಿಸುತ್ತಾನೆ. ಶ್ರೀಪಾದರಾಜನದು ನರಹರಿತೀರ್ಥರ ನಂತರ ದಾಸಸಾಹಿತ್ಯವನ್ನು ಮುಂದುವರಿಸಿದ ಕೀರ್ತಿ ಇವರದಾಗಿದೆ. 'ರಂಗವಿಠಲ' ಎಂಬ ಅಂಕಿತನಾಮ ಅನೇಕ ದೇವರ ನಾಮಗಳನ್ನು ರಚಿಸಿದ್ದಾರೆ. ಆಧ್ಯಾತ್ಮ ಅನುರಾಗ ಮಹಿಮಾನ್ವಿತನಾಗಿ ಈತನು ಕಂಡು ಬರುತ್ತಾನೆ. 'ಭಕ್ತಿ ಬೇಕು, ವಿರಕ್ತಿ ಬೇಕು, ಶಕ್ತಿ ಬೇಕು, ಮುಂದೆ ಮುಕ್ತಿ ಬಯಸುವಗೆ' ಎಂಬುದು ಈತನ ಆಧ್ಯಾತ್ಮಕ ನಿಲುವಾಗಿದೆ. ವ್ಯಾಸರಾಯರು,ಶ್ರೀಪಾದರಾಜನ ಶಿಷ್ಯನಾದ ವ್ಯಾಸರಾಯನು ನ್ಯಾಯಾಂಮೃತ ತರ್ಕತಾಂಡವ, ತಾತ್ರ್ಯೆಯಚಂದ್ರಿಕಾ ಮೂರು ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾನೆ. ಇವರ ಕೀರ್ತನೆಗಳ ಅಂಕಿತನಾಮ ಕೃಷ್ಣ, ಶ್ರೀಕೃಷ್ಣ, ಸಿರಿಕೃಷ್ಣ ವ್ಯಾಸರಾಯನಿಂದ ವ್ಯಾಸಪಥ, ದಾಸಪಥಗಳೆರಡು ಶ್ರೀಮಂತವಾದವು. ವಿಜಯದಾಸರು ಪ್ರಸನ್ನ ವೆಂಕಟದಾಸರ ಸಮಕಾಲೀನರು. 'ಹಯವದನ ವಿಠಲ' ಎಂಬ ಅಂಕಿತದಿಂದ ಅನೇಕ ಹಾಡುಗಳನ್ನು ರಚಿಸಿದ್ದಾರೆ. ಗೋಪಾಲದಾಸರು 'ಗೋಪಾಲ ವಿಠಲ' ಇವರ ಅಂಕಿತನಾಮ. ಜಗನ್ನಾಥದಾಸರು 'ಜಗನ್ನಾಥ ವಿಠಲ' ಎನ್ನುವ ಅಂಕಿತನಾಮವನ್ನು ಹೊಂದಿದ್ದಾರೆ. ಜಗನ್ನಾಥದಾಸರು 200 ಕೀರ್ತನೆಗಳು ಲಭ್ಯವಾಗಿವೆ. ಕೀರ್ತನೆ, ಸುಳಾದಿಗಳನ್ನು ಮಾತ್ರವೇ ಅಲ್ಲದೆ ತ್ರಿಪದಿಯ ಛಂದಸ್ಸಿನಲ್ಲಿ ಭಕ್ತಿ ಭರಿತವಾದ 'ತತ್ವಸುವಾಲಿಗಳನ್ನು' ವಿಷ್ಣುಸ್ತುತಿರೂಪವಾದ 27 ನುಡಿಗಳನ್ನು ಒಳಗೊಂಡ ತಂತ್ರಸಾರವನ್ನು ರಚಿಸಿದ್ದಾರೆ. ಹೀಗೆ ಒಟ್ಟಾರೆಯಾಗಿ ಪುರಂದರದಾಸರು ಹಾಗೂ ಕನಕದಾಸರ ವಿಚಾರಗಳು ದಾರ್ಶನಿಕ ಸಮಾಜವನ್ನು ಕಟ್ಟುವಲ್ಲಿ ಜೊತೆಗೆ ಸಾಮಾಜಿಕ ಕಾಳಜಿ, ಸಾಮಾಜಿಕ ನೈತಿಕ ಪ್ರಜ್ಞೆ, ಗುರುವಿನೊಂದಿಗೆ ಗೌರವದ ಮನೋಭಾವನೆ ಅಸ್ಪೃಶ್ಯತಾ ನಿವಾರಣೆ, ಮೌಢ್ಯತನದ ಖಂಡನೆ ಇದೆ. ಎಲ್ಲ ದಾಸರು ಭಕ್ತಿಯ ಕೀರ್ತನೆಗಳ ಮೂಲಕ ಸಮಾಜವನ್ನು ಎಚ್ಚರಿಸಿದ ದಾಸರಾಗಿದ್ದಾರೆ

ಕನಕದಾಸರ ಕೀರ್ತನೆಗಳಲ್ಲಿ ಆಧುನಿಕ ಮೌಲ್ಯಗಳು ಎಂಬ ಅರ್ಥದಲ್ಲಿ ಈ ವಿಷಯವನ್ನು ನಾನು ಗಮನಿಸುವುದಾದರೆ ಹಲವಾರು ಬಗೆಯ ವಿಚಾರಗಳು ಅಲ್ಲಲ್ಲಿ ಮಂಡಿತವಾಗಿದೆ. ಅಲ್ಲದೇ ಸಮಕಾಲೀನದ್ದಲ್ಲದ ಭಾಷಿಕ ದಾಖಲೆಯೊಂದರ ಮೌಲ್ಯ ವ್ಯವಸ್ಥೆಯನ್ನು ಹೇಗೆ ಗ್ರಹಿಸಬೇಕೆಂಬುದರ ಬಗ್ಗೆಯೇ ಕೆಲವು ಸಂದೇಹಗಳು ಸಾಧ್ಯ ಎನ್ನಬಹುದು.

ನ್ಯವಾಗಿ ಕನಕದಾಸರ ಕೀರ್ತನೆಗಳ ಬಗ್ಗೆ ಮಾತನಾಡುವಾಗ ಅವರು ಕೆಳವರ್ಗದವರಾಗಿದ್ದು ಅನಂತರ ದಾಸಕೂಟದಲ್ಲಿದ್ದುಕೊಂಡು ಅನುಭವಿಸಿದ ಸಂಗತಿಗಳನ್ನು ಆಧರಿಸಿದ ಕೆಲವು ನಿರ್ಣಯಾತ್ಮಕವಾದ ನಿಲುವುಗಳನ್ನು ಕೀರ್ತನೆಗಳಲ್ಲಿ ತೆಗೆದುಕೊಳ್ಳುವುದುಂಟು. ಅಂಥ ಮಾತುಗಳಲ್ಲಿ ಕನಕದಾಸರ ಕೀರ್ತನೆಗಳಲ್ಲಿ ತನ್ನ ವರ್ಗದ ನೆನಪುಗಳನ್ನು ಕಳೆದುಕೊಳ್ಳಲಾಗದೆ ಇನ್ನೊಂದು ಉನ್ನತ ವರ್ಗದಲ್ಲಿ ಪೂರ್ಣವಾಗಿ ಬೆರೆಯಲಾಗದೆ ಹೋಗುವವನ ತಾಕಲಾಟಗಳು ಇವೆಯೆಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಉದಾಹರಣೆಗೆ ಕನಕದಾಸರ 'ರಾಮಧ್ಯಾನ್ಯ ಚರಿತೆ' ಯ ಬಗ್ಗೆ ಮಾತನಾಡುವಾಗ ಅದರಲ್ಲಿ ಬಡವ ಮತ್ತು ಶ್ರೀಮಂತರ ನಡುವಣ ಅಂತರವನ್ನು ಕುರಿತಂತೆ ತಮ್ಮ ಸಮಕಾಲೀನ ವಿಚಾರಧಾರೆ ಹಾಗೂ ಅದರ ಪರಿಣಾಮವಾಗಿ ಉಂಟಾಗಿದ್ದ ಸಾಮಾಜಿಕ ವೈಷಮ್ಯಗಳನ್ನು ಹೇಳಲು ಪ್ರಯತ್ನಿಸಲಾಗಿದೆ ಹಾಗೂ ಕನಕದಾಸರು ವರ್ಗವೈಷಮ್ಯವನ್ನು ಕೀರ್ತನೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ ದ್ದಾರೆ. ಹಾಗೆ ನೋಡಿದರೆ ಯಾವುದೇ ಒಂದು ದಾಖಲೆಯನ್ನು ಅದರಲ್ಲೂ ಜನಪದದ ಭಾಗವಾಗಿ ಹೋಗಿರುವ ಭಾಷಿಕ ದಾಖಲೆಯನ್ನು ನಾವು ಹೀಗೆ ವಿವರಿಸಲು ಬರುತ್ತದೆ. ಆದರೆ ಕೆಲವೊಮ್ಮೆ ವಿವರಣೆ ನೇರವಾದ ತರ್ಕವನ್ನು ಅವಲಂಬಿಸಿದರೆ ಇನ್ನುಳಿದ ಕಡೆಗಳಲ್ಲಿ ಕೊಂಚ ಬಳಸುದಾರಿ ಹಿಡಿಯಬೇಕಾಗಿ ಬರುತ್ತದೆ.

**ಆದರೆ ಕನಕದಾಸರ ರಚನೆಯನ್ನು ನಾವು ಇನ್ನೂ**

ಒಂದು ನಿಟ್ಟಿನಲ್ಲಿ ನೋಡಲು ಸಾಧ್ಯ. ಅದನ್ನು ಕುರಿತು ಈಗ ಗಮನಿಸಬಹುದು. ಮೇಲಿಂದ ಮೇಲೆ ಜನರು ದೈನಿಕ ವ್ಯವಹಾರಗಳ ಭಾಗವಾಗಿ ಬಳಕೆಯಾಗುವ ಭಾಷಿಕ ದಾಖಲೆಗಳಲ್ಲಿ ಹಲವು ಇನ್ನೂ ನಮ್ಮ ಕೂಲಂಕುಷವಾದ ವಿಶ್ಲೇಷಣೆಗೆ ಒಳಗಾಗಿಲ್ಲ. ಅಂತ ಭಾಷಿಕ ರಚನೆಗಳಲ್ಲಿ, ಕೆಲವು ನಮ್ಮ ಪ್ರಾಚೀನ ಸಾಹಿತ್ಯದ ಭಾಗಗಳೂ ಆಗಿರುತ್ತದೆ. ಈ ಭಾಗಗಳು ಕೆಲವು ಕಡೆ ಬದುಕಿನ ಬಗ್ಗೆ ನಿರ್ಣಯಗಳನ್ನು ಮಂಡಿಸಲು ಅಲ್ಲದೆ ಕೇವಲ ಆಚರಣೆಯಾಗಿಯೂ ಬಳಕೆಯಾಗುತ್ತಿರಬಹುದು. ನಮ್ಮ ಹಳೆಯ ಸಾಹಿತ್ಯದಲ್ಲಿ ಮುಖ್ಯವಾಗಿ ವಚನಗಳು ಮತ್ತು ಕೀರ್ತನೆಗಳು ಹೀಗೆ ಕನ್ನಡಿಗರ ವ್ಯವಹಾರದ ಭಾಗವಾಗಿ ಹೋಗಿವೆ. ಕೀರ್ತನೆಗಳನ್ನೇ ತೆಗೆದುಕೊಳ್ಳೋಣ.

"ಎಲ್ಲಾರೂ ಮಾಡೋದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ"

ಎಂಬ ಕನಕದಾಸರ ರಚನೆಯನ್ನು ನೋಡೋಣ. ಕನಕದಾಸರು ಕೀರ್ತನೆಯನ್ನು ಯಾವ ಉದ್ದೇಶಕ್ಕಾಗಿ ರಚಿಸಬೇಕಾಗಿ ಬಂತೋ ಎಂಬ ಸಂಗತಿ ಮುಖ್ಯಅಲ್ಲ. ಬಳಸುವವರು ಈ ಅಂಶವನ್ನು ಕುರಿತಂತೆ ಯೋಚಿಸುವುದೂ ಇಲ್ಲ. ಈ ಹೊತ್ತಿಗೆ ಅವರ ಅನುಭವಕ್ಕೆ ಅದು ನಿಲುಕುವ ಕ್ರಮದಲ್ಲಿ ವ್ಯಾಖ್ಯಾನಿಕೊಂಡು ಅದನ್ನು ಬಳಸುವವರು. ಬಹುಮಟ್ಟಿಗೆ ಜನರು ತಮ್ಮ ದುಡಿಮೆಗಳಲ್ಲಿ ಮಗ್ನರಾಗಿ ಜೀವನ ನಿರ್ವಹಣೆ ಮಾಡುತ್ತಾ ಹೋಗುವ ಕ್ರಮವನ್ನು ಕಾಣುವ ಯಾರಾದರೂ ಈ ಕೀರ್ತನೆಯನ್ನು ಹೋಲಿಕೆಗಾಗಿ ಉಲ್ಲೇಖಿಸಬಹುದು. ಅಂದರೆ ನಮ್ಮ ಜೀವನ ಕ್ರಮದ ವಿವರಣೆಗಾಗಿ ಇಂದು ಒಂದು ಭಾಷಿಕ ದಾಖಲೆಯನ್ನು ಬಳಸುತ್ತಿರುತ್ತೇವೆ ಎನ್ನಬಹುದು.

**ಉಪಸಂಹಾರ**

ನಾನು ನಮ್ಮ ಬದುಕನ್ನು, ಅದರ ಅರ್ಥವನ್ನು ಗ್ರಾಹ್ಯವಾಗಿಸಿಕೊಳ್ಳಲು ಹೀಗೆ ಕೀರ್ತನೆಗಳ ನೆರವನ್ನು ಪಡೆಯುತ್ತೇವೆ ಎಂಬುದಂತೂ ನಿಜ. ಹೀಗೆ ಅವುಗಳ ನೆರವು ಪಡೆದಾಗ ಸ್ಪಷ್ಟವಾಗುವುದು ಈ ರಚನೆಗಳು ಈ ಕಾಲದ ವಿಚಾರಗಳನ್ನು ಹೇಗೆ ಮಂಡಿಸಿದೆ ಎಂಬ ಸಂಗತಿಯಲ್ಲಿ ಸ್ಪಷ್ಟವಾಗುವುದು ಖಂಡಿತವಾಗಿ ಇಷ್ಟೇ, ನಾವು ನಮ್ಮ ಬದುಕನ್ನು ಹೇಗೆ ವ್ಯಾಖ್ಯಾನಿಸುತ್ತಿದ್ದೇವೆ ಎಂಬುದು,ಇದನ್ನು ಮತ್ತಷ್ಟು ವಿವರಿಸುವ ಅವಶ್ಯಕತೆ ಇದೆಯೆಂದು ಭಾವಿಸುತ್ತೇನೆ.

ಇಂದಿನ ಸಮಾಜದಲ್ಲಿ ಸಾಮಾಜಿಕ ಚಿಂತಕರ ಜೀವನದ ಆದರ್ಶಗಳನ್ನು ಬೆಳೆಸುವುದು ಅವಶ್ಯಕವಿದ್ದು, ಭಕ್ತ ಕನಕದಾಸರು ಸಮಾಜದಲ್ಲಿ ಸರ್ವ ಮಾನವ ಕುಲದ ಐಕ್ಯತೆ ಸಂದೇಶ ಸಾರಿದರು, ದಾಸ ಸಾಹಿತ್ಯದಲ್ಲಿಯೇ ಕನಕದಾಸರ ಸಾಹಿತ್ಯ ಭಕ್ತಿ ಮತ್ತು ಸಮಾಜ ತಿದ್ದುವ ಮೌಲ್ಯಗಳನ್ನು ಹೊಂದಿವೆ

**ಪರಾಮರ್ಶನ ಗ್ರಂಥಗಳು**

1. ಶಂಕರನಾರಾಯಣಭಟ್ಟ; ನಳಚರಿಚರಿತ್ರೆ;2021;ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು.
2. ಡಾ.ನದಾಫ್ ಎಚ್.ಎಚ್; ಕನಕದಾಸರ ಕೃತಿಗಳು ಜಾನಪದೀಯ ಅಧ್ಯಯನ; 2017; ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ,ಕಾಗಿನೆಲೆ.
3. ಸತ್ಯನಾರಾಯಣರಾವ್ ಹೊ.ರಾ; ಕನಕದಾಸರ ಜನಪ್ರಿಯ ಕೀರ್ತನೆಗಳು; ಅಂಕಿತ ಪ್ರಕಾಶನ.
4. ಸುಧಾಕರ; ಕನಕದಾಸರ ಕೀರ್ತನೆಗಳು ಮತ್ತುಮುಂಡಿಗೆಗಳು; 2012; ಕನ್ನಡ ಮತ್ತು ಸಂಸ್ಕೃತಿ ಇಲಾಖೆ;ಬೆಂಗಳೂರು
5. ಸುನಂದ; ಕನಕದಾಸರ ಕೀರ್ತನೆಗಳು; 2022; ಓಂಕಾರ ಪ್ರಕಾಶನ,ಬೆಂಗಳೂರು
6. ಡಾ.ಸಾ.ಶಿ.ಮರುಳಯ್ಯ;ಕನಕದಾಸರ ಸಮಗ್ರ ಜೀವನ ಚರಿತ್ರೆ;
7. ದೇ.ಜವರೇಗೌಡ;ಕನಕಾವಲೋಕನ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಬೆಂಗಳೂರು
8. ರಂಗನಾಥ ರಾಮಚಂದ್ರ ದಿವಾಕರ; 1938; ಆಧ್ಯಾತ್ಮಕಾರ್ಯಾಲಯ;ಹುಬ್ಬಳ್ಳಿ
9. www.varthabharati.in
10. https://kanaja.karnataka.gov.in
11. https:// haridasa.sampada.net
12. https://prajapragathi.com
13. https://www.mangaloreuniversity.ac.in
14. https://kn.m.wikipedia.org
15. www.udayavani.com
16. https://www.vijayavani.net
17. https://akshrasurya.com
18. https://kn.quora.com
19. https://books.google.co.in
20. https://lifeinsperia.com
21. https://kn.m.wikisource.org
22. https://klesvsbcs.edu.in
23. https://sampada.net
24. https://karnatakafastnews.com
25. https://www.prajavani.net